**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.508/2025**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ ಶಿಲ್ಪಾ ಗಂಡ ಲಖನ ಜಾಧವ
ವಃ 30 ವರ್ಷ, ಉಃ ಕೂಲಿ ಕೆಲಸ
ಸಾಃ ಬಸವ ನಗರ ಸೇಡಂ ಪಟ್ಟಣ,
ತಾಃ ಸೇಡಂ, ಜಿಃ ಕಲಬುರಗಿ

----

**ದೋಷಾರೋಪಣೆ**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 14-07-2023 ರಂದು ಸಮಯ ಸಾಯಂಕಾಲ 05.40 ಗಂಟೆ ಸುಮಾರಿಗೆ, ಚಾಸಾ.1, ಸಿಬ್ಬಂದಿ ಮತ್ತು ಪಂಚರೊಂದಿಗೆ ಗಸ್ತು ಮಾಡುತ್ತಿರುವಾಗ ಸೇಡಂ ಪಟ್ಟಣದ ಬಸವನಗರದಲ್ಲಿರುವ ಶಿಲ್ಪಾ ಗಂಡ ಲಖನ ಜಾಧವ ಇವರ ಮನೆಯ ಮೇಲೆ ದಾಳಿ ಮಾಡಿದಾಗ ಮನೆಯ ಕೋಣೆಯ ಬಲಭಾಗದ ಮೂಲೆಯಲ್ಲಿ ಸುಮಾರು 10 ಲೀ. ಎರಡು ಪ್ಲಾಸ್ಟಿಕ ಬಕೇಟನಲ್ಲಿ ತಲಾ ಒಂದರಲ್ಲಿ ಅರ್ಧ ಲೀ. ಸಾಮರ್ಥ್ಯದ ಪ್ಲಾಸ್ಟಿಕ ಕವರನಲ್ಲಿ ಒಟ್ಟು 10 ಲೀ. ಕಲಬೇರಿಕೆ ಸೇಂದಿ ಹೀಗೆ ಒಟ್ಟು ಎರಡು ಪ್ಲಾಸ್ಟಿಕ ಬಕೇಟನಲ್ಲಿ 20 ಲೀ. ಕಲಬೇರಿಕೆ ಸೇಂದಿಯನ್ನು ಮಾರಾಟದ ಉದ್ದೇಶಕ್ಕಾಗಿ ಸಂಗ್ರಹಿಸಿ ಇಟ್ಟಿರುವುದು ಕಂಡು ಬಂದಿದ್ದು, ಸದರಿ ಸೇಂದಿಯನ್ನು ಜಪ್ತಿ ಮಾಡಿಕೊಂಡಿದ್ದು ಮತ್ತು ಸದರಿಯವುಗಳನ್ನು ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಅದು ಮಾನವ ಸೇವನೆಗೆ ಯೋಗ್ಯವಾಗಿರುವುದಿಲ್ಲ ಎಂದು ಧೃಢಪಟ್ಟಿದ್ದು, ಕಾರಣ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32, 38(A) ಸಂಗಡ ಭಾ.ದಂ.ಸಂ.ಕಲಂ 273 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 07-01-2026 ಪ್ರ.ದ.ನ್ಯಾ.ದಂ. ಸೇಡಂ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.**

**ಸಿಸಿ ನಂ.508/2025**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಅಬಕಾರಿ ಪೊಲೀಸ್ ಸೇಡಂ

-ಃಃ ವಿರುದ್ದ ಃಃ-

ಆರೋಪಿ ಃ ಶಿಲ್ಪಾ ಗಂಡ ಲಖನ ಜಾಧವ
ವಃ 30 ವರ್ಷ, ಉಃ ಕೂಲಿ ಕೆಲಸ
ಸಾಃ ಬಸವ ನಗರ ಸೇಡಂ ಪಟ್ಟಣ,
ತಾಃ ಸೇಡಂ, ಜಿಃ ಕಲಬುರಗಿ

**ಆರೋಪಿತರ ಹೇಳಿಕೆ**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೊ ಅಥವಾ ವಿಚಾರಣೆ ನಡೆಯಬೇಕಾ?

ಉಃ-

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 07-01-2026 ಪ್ರ.ದ.ನ್ಯಾ.ದಂ. ಸೇಡಂ.